# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.07/2022

CW-7/PW-6

| | | |
|---|---|---|
| ಹೆಸರು | ಃ- | ಶಿವರಾಜು |
| ತಂದೆ ಹೆಸರು | ಃ- | ಮರಿಲಿಂಗಯ್ಯ |
| ವಯಸ್ಸು | ಃ- | 36 ವರ್ಷ |
| ವೃತ್ತಿ | ಃ- | ಕಾರ್ಪೆಂಟರ್ |
| ವಾಸ ಸ್ಥಳ | ಃ- | ದ್ಯಾವರಸೇಗೌಡನದೊಡ್ಡಿ |
| ದಿನಾಂಕ | ಃ- | 20-02-2025 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸುಮಾರು 3 ವರ್ಷಗಳ ಹಿಂದೆ ರಾಮನಗರ ಗ್ರಾಮಾಂತರ ಠಾಣೆಯ ಪೊಲೀಸರು ಪೊಲೀಸ್ ಠಾಣೆಗೆ ನನ್ನನ್ನು ಕರಸಿದ್ದರು. ಅಲ್ಲಿ ಮನೋಜ್ ಮತ್ತು ಮತ್ತಿಬ್ಬರು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ರವರ ಚಿನ್ನದ ಒಡವೆಗಳನ್ನು ಆರೋಪಿತರು ಕಳ್ಳತನ ಮಾಡಿದ್ದ ವಿಚಾರವಾಗಿ ಪೊಲೀಸ್ ಠಾಣೆಗೆ ಕರೆಸಿದ್ದರು. ಆ ಆಸಾಮಿಗಳು ಚಾಸಾ-1 ರವರ ಚಿನ್ನದ ಒಡವೆಯನ್ನು ಕಳ್ಳತನ ಮಾಡಿಕೊಂಡು ಕಂಪನಿಗೆ ಮಾರಾಟ ಮಾಡಿದ್ದು, ಕಂಪನಿಯವರು ಚಿನ್ನದ ಒಡವೆಯನ್ನು ಕರಗಿಸಿ ಗಟ್ಟಿ ಮಾಡಿದ್ದಾರೆಂದು ತಿಳಿಯಿತು. ಸದರಿ ಚಿನ್ನದ ಗಟ್ಟಿಯನ್ನು ಪೊಲೀಸ್ ಠಾಣೆಯಲ್ಲಿ ತೋರಿಸಿದರು. ಪೊಲೀಸರು ಮಹಜರ್ ಮಾಡಿ ಅದನ್ನು

ಜಪ್ತಿ ಮಾಡಿಕೊಂಡರು. ಆಗ ಸಮಯ ಮಧ್ಯಾಹ್ನ 1.30 ರಿಂದ 2.00 ಗಂಟೆ ಸಮಯ. ಮಹಜರ್ ಕಾಲಕ್ಕೆ ಇನ್ನಿಬ್ಬರು ಹಾಜರಿದ್ದರು, ಅವರ ಹೆಸರು ನೆನಪಿಲ್ಲ. ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಮಹಜರನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಚಿನ್ನದ ಗಟ್ಟಿಯ ಫೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಅದರ ಫೋಟೋವನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ-7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಕೆ.ಕೆ., ವಕೀಲರಿಂದಃ-</u>

ಮಹಜರ್ ಕಾಲಕ್ಕೆ ಹಾಜರಿರಬೇಕೆಂದು ಪೊಲೀಸರು ನನಗೆ ನೋಟಿಸ್ ಕೊಟ್ಟಿರಲಿಲ್ಲ. ಚಿನ್ನದ ಗಟ್ಟಿಯನ್ನು ಯಾರು ತಂದು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಚಿನ್ನದ ಗಟ್ಟಿ 35 ರಿಂದ 40 ಗ್ರಾಂ ತೂಕ ಇತ್ತು. ಮಹಜರ್‌ನಲ್ಲಿ ಪೊಲೀಸರು ಏನು ಬರೆದುಕೊಂಡರು ಎಂದು ಗೊತ್ತಿಲ್ಲ. ನಿಪಿ-7 ಫೋಟೋದಲ್ಲಿ ಚಿನ್ನದ ಗಟ್ಟಿ ಎಲ್ಲಿಯೂ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್‌ಗೆ ಸಹಿ ಮಾಡಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1ನೇ ಆರೋಪಿ ಪರ ಶ್ರೀ ಎಂ.ಜಿ.ಎಂ., ವಕೀಲರು 2ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.